Presented on : 15-04-2015
Registered on : 15-04-2015
Decided on : 08-04-2026
Duration : 10 years, 11 months, 24 days

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸೇಡಂ**

**ಉಪಸ್ಥಿತರುಃ**
**ಶ್ರೀ ಬಾಲು,**
ಬಿ.ಎ., ಎಲ್ಎಲ್.ಬಿ.,
ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸೇಡಂ

**ಸಿ.ಸಿ.ನಂ.164/2015**

**ದಿನಾಂಕಃ 8ನೇ ಏಪ್ರಿಲ್ 2026 ರಂದು**

**ಫಿರ್ಯಾದಿದಾರರುಃ** ಕರ್ನಾಟಕ ರಾಜ್ಯ (ಸೇಡಂ ಪೊಲೀಸರಿಂದ)

**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ದ -**

**ಆರೋಪಿತರುಃ**

1. ಬಸವರಾಜ ತಂದೆ ರಾಮರೆಡ್ಡಿ ಧನರೆಡ್ಡಿ,
   ವಃ 60 ವರ್ಷ, ಉಃ ಒಕ್ಕಲುತನ.
2. ರಮೇಶ ತಂದೆ ಬಸವರಾಜ ಧನರೆಡ್ಡಿ,
   ವಃ 35 ವರ್ಷ, ಉಃ ಒಕ್ಕಲುತನ.
3. ಜನಾರ್ಧನರೆಡ್ಡಿ ತಂದೆ ಬಸರಾಜ ಧನರೆಡ್ಡಿ,
   ವಃ 35 ವರ್ಷ, ಉಃ ಒಕ್ಕಲುತನ,
   ಎಲ್ಲರೂ ಸಾಃ ಕೊಡ್ಲಾ ಗ್ರಾಮ, ತಾಃ ಸೇಡಂ.

**(ಶ್ರೀ ಎಸ್. ಬಿ.ಟಿ. ವಕೀಲರು)**

| | | | |
|---|---|---|---|
| 1. | ಪ್ರಕರಣ ನಡೆದ ದಿನಾಂಕ | : | 14.08.2014 |
| 2. | ಪ್ರಕರಣ ದಾಖಲಾದ ದಿನಾಂಕ | : | 25.08.2014 |

3. ಫಿರ್ಯಾದಿದಾರರ ಹೆಸರು : ಶ್ರೀಮಂತಿ ಸರೋಜನಮ್ಮ ಗಂಡ ಶಿವಶರಣಪ್ಪ

4. ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕ : 07.08.2024

5. ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕ : 13-03-2026

6. ಆಪಾದನೆಗಳು : ಭಾ.ದಂ.ಸಂ.ಕಲಂ.447, 427, 504, ಮತ್ತು 506 ಸಂಗಡ 34.

7. ನ್ಯಾಯಾಧೀಶರ ತೀರ್ಮಾನ : ಅಂತಿಮ ಆದೇಶದಂತೆ

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸೇಡಂ.**

**ತೀರ್ಪು**

ಆರಕ್ಷಕ ಉಪ ನೀರಿಕ್ಷಕರು, ಸೇಡಂ ಪೋಲಿಸ ಠಾಣೆ, ಇವರು ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 447, 427, 504 ಮತ್ತು 506 ಸಂಗಡ 34 ರನ್ವಯ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಮೊಕದ್ದಮ್ಮೆಯ ಸಂಕ್ಷಿಪ್ತ ವಿವರಣೆ:-**

ದಿನಾಂಕ 14.08.2014 ರಂದು ಮಧ್ಯಾಹ್ನ 01-00 ಗಂಟೆಯ ಸುಮಾರಿಗೆ ಸೇಡಂ ಪೋಲೀಸ ಠಾಣೆಯ ಹದ್ದಿಯಲ್ಲಿರುವ ಕೊಡ್ಲಾ ಗ್ರಾಮದ ಸಿವೂಂತರದ ಪಿರ್ಯಾದಿಯ ಮೂಡಲಗಡ್ಡಿ ಹೊಲ ಸರ್ವೆ ನಂಃ 643 ರಲ್ಲಿ ಚಾಸಾ-1 ಮತ್ತು 4 ನೇದ್ದವರು ಕೂಡಿ ತಮ್ಮ ಹೊಲಕ್ಕೆ ಹೋದಾಗ 1 ರಿಂದ 3 ನೇ ಆರೋಪಿತರು ಹೋಲದಲ್ಲಿ ಅಕ್ರಮ ಪ್ರವೇಶ ಮಾಡಿ ಎಣ್ಣೆ

ಹೋಡಿಯುವ ಎರಡು ಸ್ರೇಯರ ಡಬ್ಬಿಯಿಂದ ಯಾವುದೋ ಒಂದು ಕಳೆನಾಶಕ ಔಷದ ಸಿಂಬಪಡಿಸುತ್ತಿದ್ದಾಗ ಚಾಸಾ-1 ನೇದ್ದವಳು ನಮ್ಮ ತೊಗರಿ ಬೆಳೆಗೆ ಎಣ್ಣೆ ಯಾಕೆ ಹೋಡಿಯುತ್ತಿರಿ ಅಂತಾ ಕೇಳಿದ್ದಕ್ಕೆ 1ನೇ ಆರೋಪಿತನು ಅವಳಿಗೆ ರಂಡಿ ನಾವು ನಿನ್ನ ಹೊಲ ಬೆಳೆಯುಲು ಬಿಡಿಯುದಿಲ್ಲಾ ಎಣ್ಣೆ ಹೊಡೆದು ನಾಶ ಮಾಡುತ್ತೇವೆ ಏನು ಮಾಡುಕೊತಿ ಮಾಡಿಕೋ ಹೋಗು ಅಂತಾ ಅವಾಚ್ಯ ಶಬ್ದಗಳಿಂದ ಬೈದು ಹಾಗೇ ಎಣ್ಣೆ ಸಿಂಪಡಿಸುತ್ತಾ ಆರೋಪಿತರು ಸುಮ್ಮನೆ ಹೋಗು ಇಲ್ಲಾ ಅಂದರೆ ನಿನಗೆ ಸುಟ್ಟು ಸಾಯಿಸುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು, ಆಗ ಚಾಸಾ-6 ರಿಂದ 8 ರವರು ಘಟನೆಯನ್ನು ನೋಡಿದ್ದು. 1 ರಿಂದ 3 ನೇ ಆರೋಪಿತರು ತೊಗರಿ ಬೆಳೆಗೆ ಕಳೆ ನಾಶಕ ಔಷದ ಸಿಂಪಡಿಸಿ ಬೆಳೆ ಹಾನಿ ಮಾಡಿದ್ದು ಎಂದು ಪಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಸೇಡಂ ಪೊಲೀಸರು ತಮ್ಮ ಠಾಣಾ ಗುನ್ನೆ ನಂ.209/2014 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಆರೋಪಿತರು ತನಿಖಾ ಕಾಲಕ್ಕೆ ಜಾಮೀನು ಪಡೆದುಕೊಂಡಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತನ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 447, 427, 504 ಮತ್ತು 506 ಸಂಗಡ 34 ರನ್ವಯ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತರ ಹಾಜರಾತಿಯನ್ನು ಪಡೆಯಲಾಯಿತು. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತರಿಗೆ ನೀಡಿ, ದೋಷಾರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಭಾರತೀಯ ದಂಡ ಸಂಹಿತೆ ಕಲಂ 447, 427, 504 ಮತ್ತು 506

ಸಂಗಡ 34 ರನ್ವಯ ದೋಷಾರೋಪಣೆಯನ್ನು ರಚಿಸಿ ಆರೋಪಿತನಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತರ ವಿರುದ್ದ ಅಪಾದನೆಗಳನ್ನು ರುಜುವಾತು ಪಡಿಸುವ ಸಲುವಾಗಿ ಪ್ರಾಸಾ.1 ರಿಂದ 8 ಎಂದು ಸಾಕ್ಷಿ ವಿಚಾರಣೆ ಮಾಡಿದ್ದು ಹಾಗೂ ನಿಪಿ.1 ರಿಂದ 6 ಎಂದು ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತದೆ. ತದನಂತರ ಸರಕಾರಿ ಸಹಾಯಕ ಅಭಿಯೋಜಕರು ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

6. ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ದಾಖಲಿಸಲಾಗಿದೆ.

7. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

8. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆ.

**ಅಂಶಗಳು**

1. ದಿನಾಂಕ 14.08.2014 ರಂದು ಮದ್ಯಾಹ್ನ 01.00 ಗಂಟೆಯ ಸುಮಾರಿಗೆ ಸೇಡಂ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಕೊಡ್ಲಾ ಗ್ರಾಮದ ಸಿಮಾಂತರದಲ್ಲಿರುವ ಫಿರ್ಯಾದಿ ಹೊಲ ಸರ್ವೆ ನಂಃ 643 ಕ್ಕೆ ಆರೋಪಿತರು ಸಮಾನ ಉದ್ದೇಶದಿಂದ ಕೊಡಿಕೊಂಡು ಚಾಸಾ-1 ನೇದ್ದವರ ಹೊಲಕ್ಕೆ ಅತೀಕ್ರಮ ಪ್ರವೇಶ ಮಾಡಿದ್ದು ಆ ಮೂಲಕ ಭಾ.ದಂ.ಸಂಹೀತೆ ಕಲಂ 447 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

2. ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರೆಲ್ಲರೂ ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು, ಚಾಸಾ-1 ನೇದ್ದವರ ಹೊಲಕ್ಕೆ ಅತೀಕ್ರಮ ಪ್ರವೇಶ ಮಾಡಿ ಹೊಲದಲ್ಲಿನ ಬೆಳೆಗೆ ಕಳೆ ನಾಶಕ ಔಷದ ಸಿಂಪಡಿಸಿ ಬೆಳೆಯನ್ನು ಹಾಳು ಮಾಡಿರುತ್ತಾರೆ, ಆ ಮೂಲಕ ಭಾ.ದಂ.ಸಂಹೀತೆ ಕಲಂ 427 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

3. ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದಾಗ ಚಾಸಾ.1 ರವರು ನಮ್ಮ ತೊಗರಿ ಬೆಳೆಗೆ ಎಣ್ಣೆ ಏಕೆ ಹೊಡಿಯುತ್ತಿರ ಅಂತಾ ಕೇಳಿದ್ದಕ್ಕೆ 1ನೇ ಆರೋಪಿ ರಂಡಿ ನಾವು ನಿನ್ನ ಹೊಲ ಬೆಳೆಯಲು ಬಿಡಿಯುದಿಲ್ಲ ಎಣ್ಣೆ ಹೊಡೆದು ನಾಶ ಮಾಡುತ್ತೇವೆ ಏನೂ ಮಾಡಿಕೋತಿ ಮೊಡಿಕೊ ಹೋಗು ಅಂತಾ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 504 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

4. ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಬಂದು ಚಾಸಾ-1 ನೇದ್ದವರ ಹೊಲಕ್ಕೆ ಅತೀಕ್ರಮ ಪ್ರವೇಶ ಮಾಡಿ ಬೆಳೆಯನ್ನು ಹಾಳು ಮಾಡಿದ್ದಲ್ಲದೆ, ಚಾಸಾ-1 ನೇದ್ದವಳಿಗೆ ಸುಮ್ಮನೆ ಹೋಗು ಇಲ್ಲ ಅಂದರೆ ನಿನಗೆ ಸುಟ್ಟು ಸಾಯಿಸುತ್ತೇವೆ ಅಂತಾ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 506 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

5. ಯಾವ ಆದೇಶ ಅಥವಾ ಶಿಕ್ಷೆ?

9. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

ಅಂಶ ನಂ.1 ರಿಂದ 4: **ನಕರಾತ್ಮಕವಾಗಿ**

ಅಂಶ ನಂ.5 : **ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ**

**ಕಾ ರ ಣ ಗ ಳು**

10. **ಅಂಶ ನಂ.1 ರಿಂದ 4:-** ಸದರಿ ಎಲ್ಲಾ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ಅಭಿಯೋಜನೆಯು ಆಪಾದಿಸಿರುವಂತೆ ದಿನಾಂಕ 14.08.2014 ರಂದು ಮಧ್ಯಾಹ್ನ 01-00 ಗಂಟೆಯ ಸುಮಾರಿಗೆ ಸೇಡಂ ಪೋಲೀಸ ಠಾಣೆಯ ಹದ್ದಿಯಲ್ಲಿರುವ ಕೊಡ್ಲಾ ಗ್ರಾಮದ ಸಿಮಾಂತರದ ಪಿರ್ಯಾದಿಯ ಮೂಡಲಗಡ್ಡಿ ಹೊಲ ಸರ್ವೆ ನಂಃ 643 ರಲ್ಲಿ ಚಾಸಾ-1 ಮತ್ತು 4 ನೇದ್ದವರು ಕೂಡಿ ತಮ್ಮ ಹೊಲಕ್ಕೆ ಹೋದಾಗ 1 ರಿಂದ 3 ನೇ ಆರೋಪಿತರು ಹೋಲದಲ್ಲಿ ಅಕ್ರಮ ಪ್ರವೇಶ ಮಾಡಿ ಎಣ್ಣೆ ಹೋಡಿಯುವ ಎರಡು ಸ್ಪ್ರೇಯರ ಡಬ್ಬಿಯಿಂದ ಯಾವುದೋ ಒಂದು ಕಳೆನಾಶಕ ಔಷದ ಸಿಂಬಪಡಿಸುತ್ತಿದ್ದಾಗ ಚಾಸಾ-1 ನೇದ್ದವಳು ನಮ್ಮ ತೊಗರಿ ಬೆಳೆಗೆ ಎಣ್ಣೆ ಯಾಕೆ ಹೋಡಿಯುತ್ತಿರಿ ಅಂತಾ ಕೇಳಿದ್ದಕ್ಕೆ 1ನೇ ಆರೋಪಿತನು ಅವಳಿಗೆ ರಂಡಿ ನಾವು ನಿನ್ನ ಹೊಲ ಬೆಳೆಯುಲು ಬಿಡಿಯುದಿಲ್ಲಾ ಎಣ್ಣೆ ಹೊಡೆದು ನಾಶ ಮಾಡುತ್ತೇವೆ ಏನು ಮಾಡುಕೊತಿ ಮಾಡಿಕೋ ಹೋಗು ಅಂತಾ ಅವಾಚ್ಯ ಶಬ್ದಗಳಿಂದ ಬೈದು ಹಾಗೇ ಎಣ್ಣೆ ಸಿಂಪಡಿಸುತ್ತಾ ಆರೋಪಿತರು ಸುಮ್ಮನೆ ಹೋಗು ಇಲ್ಲಾ ಅಂದರೆ ನಿನಗೆ ಸುಟ್ಟು ಸಾಯಿಸುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು, ಆಗ ಚಾಸಾ-6 ರಿಂದ 8 ರವರು ಘಟನೆಯನ್ನು ನೋಡಿದ್ದು. 1 ರಿಂದ 3 ನೇ ಆರೋಪಿತರು ತೊಗರಿ ಬೆಳೆಗೆ ಕಳೆ ನಾಶಕ ಔಷದ ಸಿಂಪಡಿಸಿ ಬೆಳೆ ಹಾನಿ ಮಾಡಿದ್ದು ಎಂದು ಪಿರ್ಯಾದಿಯನ್ನು ನೀಡಿರುತ್ತಾರೆ.

12. ಸಹಾಯಕ ಸರಕಾರಿ ಅಭಿಯೋಜಕರು ವಿಚಾರ ಮಾಡಿಕೊಂಡ ಸಾಕ್ಷಿಯಲ್ಲಿ ಪ್ರಾಸಾ.1 ಫಿರ್ಯಾದಿದಾರರು, ಪ್ರಾಸಾ-2 ಮತ್ತು 4 ಗುನ್ನೆ ಸ್ಥಳದ ಪಂಚರು, ಪ್ರಾಸಾ.3 ಸಾಕ್ಷಿದಾರರು, ಪ್ರಾಸಾ-5 ಪ್ರತ್ಯಕ್ಷ ಸಾಕ್ಷಿದಾರರು, ಪ್ರಾಸಾ.6 ಕೃಷಿ ನಿರ್ದೇಶರಕರು, ಪ್ರಾಸಾ-7 ಮತ್ತು 8 ತನಿಖಾಧಿಕಾರಿಗಳಾಗಿರುತ್ತಾರೆ. ಅಭಿಯೋಜನೆಯವರು ಗುರುತಿಸಿಕೊಂಡ ದಾಖಲೆಗಳಲ್ಲಿ ನಿಪಿ.1 ದೂರು, ನಿಪಿ.2 ಗುನ್ನೆ ಸ್ಥಳದ ಪಂಚನಾಮೆ, ನಿ.ಪಿ.3 ಸಾಕ್ಷಿ ಹೇಳಿಕೆ ಭಾಗ, ನಿ.ಪಿ-4 ವರದಿ, ನಿಪಿ-5 ಪ್ರಥಮ ವರ್ತಮಾನ ವರದಿ, ನಿ.ಪಿ-6 ಸರ್ವೇ ನಂಃ 643 ನೇದ್ದರ ಪಹಣಿ ಪತ್ರಿಕೆ ಗುರುತಿಸಲಾಯಿತು.

13. ಚಾಸಾ-1/ಪ್ರಾಸಾ-1 ಸರೋಜಮ್ಮ ಗಂಡ ಶಿವಶರಣಪ್ಪ ಇವರು ಫಿರ್ಯಾದಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರ ಪರಿಚಯ ಇದೆ. ಪೊಲೀಸರ ಹೇಳಿಕೆಯ ಮೇರಿಗೆ ಸಹಿ ಮಾಡಿದ್ದೇನೆ. ಕೆಳೆದ 9 ವರ್ಷದ ಹಿಂದೆ ಆರೋಪಿತರಿಗೂ ನಮೂಗು ಜಗಳ ಆಗಿತ್ತು. ನಾವು ತೊಗರಿ ಬೆಳೆ ಬೆಳೆದಿದ್ದೆವು ಅಂದು ಅಂದಾಜು 1 ಫೀಟ ಎತ್ತರಕ್ಕೆ ಬೆಳೆದಿತ್ತು. ಆರೋಪಿತರು ನಮ್ಮ ಹೊಲದಲ್ಲಿ ತಮ್ಮ ಹೊಲ ಅಂದು ಕೊಂಡು ತೊಗರಿ ಬೆಳೆಗೆ ಎಣ್ಣೆ ಹೊಡೆದಿರುತ್ತಾರೆ. ಎಣ್ಣೆ ಹೊಡೆದಿದ್ದರಿಂದ ನಮ್ಮ ಬೆಳೆ ನಾಶವಾಗಿದ್ದು. ಆರೊಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದ ಅಭಿಯೋಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಅಲ್ಲದೆ ಫಿರ್ಯಾದಿಯ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಗಿದೆ.

14. ಸಹಾಯಕ ಅಭಿಯೋಜಕರು ಪ್ರಾಸಾ-1 ರವರಿಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿರುತ್ತಾರೆ. ಪಾಟೀ ಸವಾಲಿನಲ್ಲಿ ಪ್ರಾಸಾ-1 ರವರು ನಿಪಿ-1 ಕ್ಕೆ ಅನುಗೂಣವಾಗಿ ಸಾಕ್ಷಿ ನುಡಿದಿರುತ್ತಾರೆ. ಅಲ್ಲದೆ, ಒಂದು ಫೀಟ ಉದ್ದದ ಹಿಡಿ ಗಾತ್ರದಷ್ಟು ಒಣಗಿದ ತೊಗರಿ ಕಟ್ಟಿಗೆಯನ್ನು ಗುರುತಿಸಿರುವುದರಿಂದ ಅದನ್ನು ಮು.ಮಾ-1 ಎಂದು ಗುರುತಿಸಲಾಗಿದೆ. ಪ್ರಾಸಾ-1 ರವರು ಆರೋಪಿತರ ಪರ ವಕೀಲರು ಪಾಟೀ ಸವಾಲಿನಲ್ಲಿ ಮು.ಮಾ.1 ಅಂದಜು 3 ಅಡಿ ಎತ್ತರ ಇರುತ್ತದೆ ಎಂದರೆ ಇರುಬಹುದು ಎಂದು ನುಡಿದಿರುತ್ತಾರೆ. ನನ್ನ ದೂರಿನಲ್ಲಿ ಮು.ಮಾ-1 ಒಂದು ಅಡಿ ಇದೆ ಎಂದು ಬರೆಸಿದ್ದೆನೆ ಎಂದರೆ ನನಗೆ ಗೊತ್ತಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಅಲ್ಲದೆ, ಘಟನೆಯಾದ ದಿನದಂದು ಫಿರ್ಯಾದಿಯನ್ನು ನೀಡಿರುತ್ತೇನೆಂದು ನುಡಿದಿರುತ್ತಾರೆ. ಆದರೆ ನಿಪಿ-1 ನ್ನು ನೋಡಿದಾಗ ಚಾಸಾ-1 ರವರು ಫಿರ್ಯಾದಿಯನ್ನು ದಿನಾಂಕಃ 25-08-

2014 ರಂದು ಸಲ್ಲಿಸಿರುವುದನ್ನು ಕಂಡು ಬರುತ್ತದೆ. ನಿಪಿ-1 ನ್ನು ಕುಲಂಕುಷವಾಗಿ ಪರಿಶೀಲಿದಾಗ ಚಾಸಾ-1 ರವರು ತನ್ನ ತೊಗರಿ ಬೆಳೆಯನ್ನು ಒಂದು ಫೀಟನಷ್ಟು ಬೆಳೆದಿದೆ ಎಂದು ಹೇಳುತ್ತಾರೆ ಆದರೆ ಪಾಟೀ ಸವಾಲಿನಲ್ಲಿ ಮು.ಮಾ-1 ಮೂರು ಫೀಟ ಇರಬಹುದು ಎಂದು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಅಭಿಯೋಜನೆಯ ಪ್ರಕರಣವು ಸಂಶಯತೀತ ಇರುವುದಿಲ್ಲ ಎಂದು ಕಂಡುಬರುತ್ತದೆ.

15. ಪ್ರಾಸಾ-2 ಗುನ್ನೆ ಸ್ಥಳದ ಪಂಚರು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-1 ಮತ್ತು ಚಾಸಾ-2 ರವರು ನನಗೆ ಪರಿಚಯವಿಲ್ಲಾ. ಪೋಲಿಸರು ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಸಾಕ್ಷಿಯು ಪಂಚನಾವೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಗಿದೆ. ಆದರೆ ನಿಪಿ-2 ರಲ್ಲಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ ಮತ್ತು ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ. ಅಲ್ಲದೆ, ಪ್ರಾಸಾ-4 ಸಹ ನಿಪಿ-2 ಕ್ಕೆ ಸಹಿ ಚಾಸಾ-1 ರವರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಪಂಚನಾವೆ ಜರುಗಿಸಿಲ್ಲ ಮತ್ತು ಯಾವುದೇ ವಸ್ತುವನ್ನು ವಶಕ್ಕೆ ಪಡೆದುಕೊಂಡಿಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ. ಸರಕಾರಿ ಸಹಾಯಕ ಅಭಿಯೋಜಕರು ಪ್ರಾಸಾ-2 ಮತ್ತು 4 ರವರಿಗೆ ಸುದೀರ್ಘ ಕಾಲ ಪಾಟೀ ಸವಾಲು ಮಾಡಿದರೂ ಸಹ ಪ್ರಾಸಾ-2 ಮತ್ತು 4 ರವರ ಸಹಿಯನ್ನು ಹೊರತುಪಡಿಸಿ ಪಾಟೀ ಸವಾಲಿನಲ್ಲಿ ಬೇರೆ ಯಾವುದೇ ಅಂಶವನ್ನು ಹೊರಹಾಕಿರುವುದಿಲ್ಲ.

16. ಪ್ರಾಸಾ.3/ಚಾಸಾ-5 ಬಸ್ಸಮ್ಮ ಗಂಡ ವೈದ್ಯನಾಥ ಪ್ರಕರಣದ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-1 ಮತ್ತು 4 ನನ್ನ ಅಕ್ಕ. ಆರೋಪಿತರು ಗೊತ್ತು. ಸರ್ವೇ 643 ರಲ್ಲಿ

ಆರೋಪಿತರ ಎಣ್ಣೆ ಹೊಡೆದು ತೊಗರಿ ಬೆಳೆ ನಾಶಪಡಿಸಿರುತ್ತಾರೆ. ಆಗ ನಾನು ಹೊಲಕ್ಕೆ ಹೋಗಿಲ್ಲ. ಸದರಿ ವಿಷಯ ನನಗೆ ಚಾಸಾ-1 ರವರು ತಿಳಿಸಿರುತ್ತಾರೆ. ಆರೋಪಿತರು ಎಣ್ಣೆ ಹೊಡೆಯುದರಿಂದ ಎಷ್ಟು ಬೆಳೆ ನಾಶ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆರೋಪಿತರು ನನಗೆ ರಂಡಿ ಭೋಸಡಿ ಅಂತಾ ಬೈದಿರುತ್ತಾರೆ. ಸದರಿ ಘಟನೆ ಯಾವ ದಿನಾಂಕದಂದು ಯಾವ ಸಮಯಕ್ಕೆ ಆಗಿದೆ ಎಂದು ನನಗೆ ಗೊತ್ತಿಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ-3 ರವರು ಘಟನಾ ನಡೆದ ದಿನದಂದು ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ಎಷ್ಟು ಬೆಳೆ ನಾಶ ಆಗಿರುತ್ತದೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲವೆಂದು ಒಪ್ಪಿಕೊಂಡಿರುವುದರಿಂದ ಪ್ರಾಸಾ-3 ರವರ ಸಾಕ್ಯಧಾರ ಮೇಲೆ ಆರೋಪಿತರು ದೋಷಿವೆಂದು ಹೇಳಲು ಬರುವುದಿಲ್ಲ. ಅಲ್ಲದೆ, ಪ್ರಾಸಾ-3 ರವರು ಚಾಸಾ-1 ರವರ ತಂಗಿಯಾಗಿರುವುದರಿಂದ ಪಿರ್ಯಾದಿದಾರರಿಗೆ ಅನುಕೂಲವಾಗಲೆಂದು ಸಾಕ್ಷಿ ನುಡಿಯುವ ಸಾಧ್ಯಾತೆ ಇರುತ್ತದೆ.

17. ಚಾಸಾ-8/ಪ್ರಾಸಾ.5 ದೇವಯ್ಯ ತಂದೆ ಬುಗ್ಯಯ್ಯ ಪ್ರತ್ಯಕ್ಷ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-1 ನನಗೆ ಗೊತ್ತಿಲ್ಲ. ಆರೋಪಿತರ ಪರಿಚಯ. ಚಾಸಾ-1 ಮತ್ತು ಆರೋಪಿತರ ನಡುವೆ ಆಗಿದೆ ಎನ್ನಲಾದ ತಂಟೆಯ ಬಗ್ಗೆ ನನಗೆ ಗೊತ್ತಿಲ್ಲ. ಪೋಲಿಸರಿಗೆ ಹೇಳಿಕೆ ನೀಡಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಸರಕಾರಿ ಸಹಾಯಕ ಅಭಿಯೋಜಕರು ಪ್ರಾಸಾ-5 ರವರಿಗೆ ಸುದೀರ್ಘ ಕಾಲ ಪಾಟೀ ಸವಾಲು ಮಾಡಿದರೂ ಸಹ ಪಾಟೀ ಸವಾಲಿನಲ್ಲಿ ಬೇರೆ ಯಾವುದೇ ಅಂಶವನ್ನು ಹೊರಹಾಕಿರುವುದಿಲ್ಲ.

18. ಚಾಸಾ-9/ಪ್ರಾಸಾ-6 ಪ್ರವೀಣಕುಮಾರ ತಂದೆ ರಮೇಶರಾವ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ 04-09-2014 ರಂದು ಚಾಸಾ-10 ರವರು ಬೆಳೆ ನಾಶ ಆಗಿದೆ ಆ ನಾಶ ಯಾವ ಕಾರಣಕ್ಕಾಗಿ ಆಗಿದೆ ಎಂದು ಅಭಿಪ್ರಾಯ ಕೇಳಿದರ ಮೇರೆಗೆ ನಾನು ಮತ್ತು ಕೃಷಿ

ವಿಜ್ಞಾನ ಕೇಂದ್ರ ರದ್ದೆವಾಡಿಯಲ್ಲಿರುವ ವಿಜ್ಞಾನಿಗಳೊಂದಿಗೆ ಘಟನೆ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಸ್ಥಳದಲ್ಲಿ ಸಂಪೂರ್ಣ ಬೆಳೆಗಳು ಅಂದಾಜು ಸೇಕಡ 80 ರಷ್ಟು ಉದಿರಿಬಿದಿತ್ತು. ಸದರಿ ಬೆಳೆಗಳು ರಾಸಾಯನಿಕ ಕಳೆ ಸಿಂಪಡೆ ಮಾಡಿದ್ದರಿಂದ ಆಗಿತ್ತು. ಆದ್ದರಿಂದ ಬೆಳೆ ಇಳುವರಿ ಬರುವುದಿಲ್ಲ ಎಂದು ಅಭಿಪ್ರಾಯ ನೀಡಿರುತ್ತಾರೆ. ಸದರಿ ವರದಿಯನ್ನು ನಿಪಿ-4 ಎಂದು ಗುರುತಿಸಲಾಗಿದೆ. ಪ್ರಾಸಾ-6 ರವರು ಆರೋಪಿ ಪರ ಮಾಡಿದ ಪಾಟೀ ಸವಾಲಿನಲ್ಲಿ ನಾವು ಅಲ್ಲಿಂದ ಗಿಡಗಳು ಪರೀಕ್ಷೆಕಾಗಿ ನಮ್ಮ ಜೊತೆಯಲ್ಲಿ ಹೋಹಿದಿಲ್ಲಾ. ನಾವು ಅಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಹಾಗೂ ಯಾರಿಗೂ ಕರೆದಿಲ್ಲಾ. ಸದರಿ ಕಳೆ ನಾಶಕ್ಕೆ ಯಾವ ಕಂಪನಿಯ ಎಂದು ಹೇಳಲು ಬರುವುದಿಲ್ಲ. ಪ್ರಾಸಾ-6 ರವರ ಮುಖ್ಯ ವಿಚಾರಣೆ ಹಾಗೂ ಪಾಟೀ ಸವಾಲನ್ನು ಕುಲಂಕುಷವಾಗಿ ಪರಿಶೀಲಿಸಿದಾಗ ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಯಾವುದೇ ಪರಿಕ್ಷೆಯನ್ನು ಕೈಗೊಂಡಿಲ್ಲವೆಂದು ಕಂಡುಬರುತ್ತದೆ. ಆದ್ದರಿಂದ ನಿಪಿ-4 ವರದಿಯ ಮೇಲೆ ಸಂಶಯ ಉಂಟಾಗುತ್ತದೆ.

19. ಚಾಸಾ.10/ಪ್ರಾಸಾ.7 ತನಿಖಾಧಿಕಾರಿಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿ. 25.08.2014 ರಂದು ಬೆಳಿಗ್ಗೆ 10-30 ಗಂಟೆಗೆ ಚಾಸಾ.1 ರವರು ಲಿಖಿತ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರಿನ ಸಾರಾಂಶದ ಮೇರೆಗೆ ನಾನು ನಮ್ಮ ಠಾಣೆ ಗುನ್ನೆ ಸಂಖ್ಯೆ 209/2014 ನೇದ್ದು ದಾಖಲಿಸಿಕೊಂಡು ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿರುತ್ತಾರೆ. ಪ್ರ ವ ವರದಿಯನ್ನು ನಿಪಿ.5 ಎಂದು ಗುರುತಿಸಲಾಗಿದೆ. ನಂತರ ಅದೇ ದಿನ ಸಾಯಂಕಾಲ 04.00 ರಿಂದ 05.00 ಗಂಟೆಯ ವರೆಗೂ ಚಾಸಾ.1 ರವರ ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇನೆ. ಅದೇ ದಿನ

ಚಾಸಾ.4 ರಿಂದ 8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ದಿನಾಂಕಃ 20-09-2014 ಚಾಸಾ.9 ರವರಿಂದ ವರದಿಯನ್ನು ಸ್ವಿಕರಿಸಿರುತ್ತೇನೆ. ನಂತರ ಸದರಿ ಪ್ರಕರಣ ಕಡತವನ್ನು ಚಾಸಾ-11 ರವರಿಗೆ ವಹಿಸಿಕೊಟ್ಟಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ.

20. ಚಾಸಾ.11/ಪ್ರಾಸಾ.8 ತನಿಖಾಧಿಕಾರಿಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿ. 01.10.2014 ಚಾಸಾ-10 ರವರಿಗಂದ ಕಡತವನ್ನು ಪಡೆದುಕೊಂಡು ದಿನಾಂಕಃ 16-11-2014 ರಂದು ಸರ್ವೆ ನಂಃ 643 ನೇದ್ದರ ಪಹಣಿ ಪತ್ರಿಕೆಯನ್ನು ಪಡೆದುಕೊಂಡು ಆರೋಪಿತರ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ.

21. ಸದರಿ ಪ್ರಕರಣದಲ್ಲಿ ಪಿರ್ಯಾದಿದಾರರು ಮತ್ತು ಪ್ರಾಸಾ.3/ಪಿರ್ಯಾದಿದಾರರ ತಂಗಿರಿಗೆ ಹೊರತುಪಡಿಸಿ ಬೇರೆ ಯಾರು ಸಾಕ್ಷಿದಾರರು ಅಭಿಯೋಜನೆಗೆ ಬೆಂಬಲ ನೀಡಿರುವುದಿಲ್ಲ. ಪ್ರಾಸಾ.2 ಮತ್ತು 4 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿದ್ದು ಇವರು ಪ್ರಕರಣದಲ್ಲಿ ಗುನ್ನೆ ಸ್ಥಳದ ಪಂಚರಾಗಿದ್ದು, ಅಲ್ಲದೇ, ಪ್ರಾಸಾ.5 ರವರು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಇವರ ಸಾಕ್ಷ್ಯ ಬಹು ಮುಖ್ಯ ವಾಗಿದ್ದು ಅದರೆ ಇವರು ಸಹ ಮುಖ್ಯ ವಿಚಾರಣೆಯಲ್ಲಿ ಹಾಗೂ ಪಾಟೀ ಸವಾಲಿನಲ್ಲಿ ಘಟನೆ ಬಗ್ಗೆ ಯಾವುದೇ ಅಂಶವನ್ನು ನುಡಿದಿರುವುದಿಲ್ಲ. ಸದರಿ ಸಾಕ್ಷಿದಾರರನ್ನು ಸಹಾಯಕ ಸರಕಾರಿ ಅಭಿಯೋಜಕರು ಸುದೀರ್ಘ ಕಾಲ ಪಾಟೀ ಸವಾಲು ಮಾಡಿದ್ದು ಪಾಟೀ ಸವಾಲಿನಲ್ಲಿ ಯಾವುದೇ ಅಂಶವನ್ನು ಹೊರಹಾಕಿರುವುದಿಲ್ಲ ಮತ್ತು ಸದರಿ ಸಾಕ್ಷಿಗಳು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವ ಬಗ್ಗೆ ಕಾರಣಗಳನ್ನು ಹೇಳಿರುವುದಿಲ್ಲ.

22. ಪ್ರಾಸಾ.7 ರವರು ಪ್ರಕರಣ ದಾಖಲಿಸಿಕೊಂಡು, ಗುನ್ಹೆ ಸ್ಥಳಕ್ಕೆ ಹೋಗಿ ಸ್ಥಳ ಪಂಚನಾಮೆಯನ್ನು ಜರುಗಿಸಿರುವ ಬಗ್ಗೆ ಹಾಗೂ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿರುವ ಬಗ್ಗೆ ಸಾಕ್ಷಿ ನುಡಿದಿದ್ದು. ಸದರಿ ಪ್ರಕರಣದಲ್ಲಿ ಫಿರ್ಯಾದಿದಾರರು ಹಾಗೂ ಆಕೆಯ ತಂಗಿಯಾದ ಪ್ರಾಸಾ-3 ರವರನ್ನು ಹೊರತುಪಡಿಸಿ ಬೇರೆ ಯಾರು ಅಭಿಯೋಜನೆಯ ಪ್ರಕರಣಕ್ಕೆ ಬೆಂಬಲಿಸಿರುವುದಿಲ್ಲ. ಅಲ್ಲದೇ ಪ್ರಾಸಾ-3 ರವರು ಫಿರ್ಯಾದಿದಾರರ ತಂಗಿಯಾಗಿರುವುದರಿಂದ ಆಕೆಗೆ ಅನುಕೂಲ ಆಗವು ದೃಷ್ಟಿಯಿಂದ ಸಾಕ್ಷ್ಯ ನುಡಿಯುವ ಸಾಧ್ಯತೆ ಇರುತ್ತದೆ. ಅಲ್ಲದೇ ಸದರಿ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-5 ರವರು ಸಹ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಅದ್ದರಿಂದ ಅಭಿಯೋಜನೆಯ ಪ್ರಕರಣದಲ್ಲಿ ಯಾವುದೇ ಹುರುಳಿಲ್ಲವೆಂದು ಕಂಡುಬರುತ್ತದೆ.

23. ಯಾವುದೇ ಪ್ರಕರಣದಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳಿಂದ ಒಂದು ದೃಷ್ಠಿ ಕೋನದಲ್ಲಿ ಆರೋಪಿತರು ತಪ್ಪಿತಸ್ಥರೆಂದು ಕಂಡು ಬಂದಿದ್ದು ಇನ್ನೊಂದು ದೃಷ್ಠಿಕೋನದಲ್ಲಿ ಮುಗ್ದರೆಂದು ಕಂಡುಬಂದಾಗ, ಆರೋಪಿತನಿಗೆ ಅನುಕೂಲಕರವಾಗುವ ನಿಲುವನ್ನು ನ್ಯಾಯಾಲಯ ತಳೆಯ ಬೇಕಾಗುತ್ತದೆ ಎಂಬುದು ಹಾಗೂ ಪ್ರಕರಣದ ಬಗ್ಗೆ ಸಂಶಯ ಉಂಟಾದಾಗ ಸದರಿ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಬೇಕೆಂಬುದು ನ್ಯಾಯ ನಿರ್ವಹಣೆಯಲ್ಲಿ ಪಾಲಿಸಿಕೊಂಡು ಬರಲಾದ ತತ್ವವಾಗಿದೆ. ಆದ್ದರಿಂದ ಮೇಲೆ ಚರ್ಚಿಸಿದಂತೆ ಈ ಪ್ರಕರಣದಲ್ಲಿ ಎಲ್ಲಾ ಸಾಕ್ಷಿ ಹಾಗೂ ಇತರ ದಾಖಲೆಗಳನ್ನು ಪರೀಶಿಲಿಸಿದಾಗ ಅಭಿಯೋಜನೆಯು ಆರೋಪಿತರ ವಿರುದ್ದ ಆಪಾದಿಸಲಾದ ಆರೋಪವನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲವಾಗಿದೆ ಹಾಗೂ ಅಭಿಯಾಜನೆಯು ಆರೋಪಿತನ ವಿರುದ್ಧ ಆಪಾದಿಸಲಾದ ಆಪಾದನೆಗಳನ್ನು ಯಾವುದೇ ಬಲವಾದ ಹಾಗೂ ಒಪ್ಪಿ ಕೊಳ್ಳುಬಹುದಾಗ ಸಾಕ್ಷ್ಯಗಳನ್ನು ಹಾಜರುಪಡಿಸಿಲ್ಲ ಹಾಗೂ ಸದರಿ

ಆಪಾದನೆಯಗಳನ್ನು ಸಂಶಯಾತತಿವಾಗಿ ರುಜುವಾತು ಪಡಿಸಲು ವಿಫಲವಾಗಿದೆ ಎಂದು ಹೇಳುತ್ತಾ, ಅಂಶ ಸಂಖ್ಯೆ 1ರಿಂದ 4ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

24. **ಅಂಶ ನಂ.5:-** ಈ ಮೇಲೆ ಹೇಳಿದ ಅಂಶ ನಂ.1 ರಿಂದ 4ರ ಮೇಲಿನ ಚರ್ಚೆಯಂತೆ ಹಾಗೂ ಕಾರಣಗಳಿಗಾಗಿ ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೇನೆ.

**ಆ ದೇ ಶ**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, 1 ರಿಂದ 3 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 447, 427, 504, 506 ಸಂಗಡ 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ನಿರ್ದೋಷಿಯೆಂದು ಬಿಡುಗಡೆ ಗೊಳಿಸಲಾಗಿದೆ.**

**ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಭದ್ರತೆಗಳನ್ನು 6 ತಿಂಗಳವರೆಗೆ ವಿಸ್ತರಿಸಲಾಗಿದೆ.**

**ಮು.ಮಾ.1 ಒಂದು ಹಿಡಿ ಗಾತ್ರದಷ್ಟು ಒಂದು ಫೀಟ ಉದ್ದದ ಒಣಗಿದ ತೊಗರಿ ಬೆಳೆ ಯಾವುದೇ ಮೌಲ್ಯ ಹೊಂದಿರದ ವಸ್ತು ಆಗಿರುವುದರಿಂದ ಅದನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಈ ಮೂಲಕ ಕಚೇರಿಗೆ ಆದೇಶಿಸಲಾಗಿದೆ.**

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 8ನೇ ಏಪ್ರಿಲ2026 ರಂದು ತೀರ್ಪನ್ನು ಘೋಷಿಸಲಾಯಿತು)

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸೇಡಂ.**

## ಅನುಬಂಧ

**ಅಭಿಯೋಜನೆಯ ಪರವಾಗಿ ಮಾಡಿಸಲಾದ ಸಾಕ್ಷ್ಯಗಳುঃ**

| | | |
|---|---|---|
| ಪಿ.ಡಬ್ಲ್ಯೂ -1 | : | ಸರೋಜಮ್ಮ ಗಂಡ ಶಿವಶರಣಪ್ಪ |
| ಪಿ.ಡಬ್ಲ್ಯೂ -2 | : | ರಿಯಾಜುದ್ದಿನ ತಂದೆ ಲಲ್ಲು ಮಿಯಾ ಹಕುಮ |
| ಪಿ.ಡಬ್ಲ್ಯೂ -3 | : | ಬಸಮ್ಮ ಗಂಡ ವೈದ್ಯಾ ನಾಥ |
| ಪಿ.ಡಬ್ಲ್ಯೂ -4 | : | ಸುರೇಶ ತಂದೆ ಬಸಣ್ಣ |
| ಪಿ.ಡಬ್ಲ್ಯೂ -5 | : | ದೇವಯ್ಯ ತಂದೆ ಭುಗ್ಗಯ್ಯ |
| ಪಿ.ಡಬ್ಲ್ಯೂ -6 | : | ಪ್ರವೀಣ ಕುಮಾರ ತಂದೆ ರಮೇಶ ರಾವ |
| ಪಿ.ಡಬ್ಲ್ಯೂ -7 | : | ಪಿ.ಎಸ್ ವನಂಜಕರ ತಂದೆ ಶಿವಪ್ಪ |
| ಪಿ.ಡಬ್ಲ್ಯೂ -8 | : | ಬಾಪುಗೌಡ ತಂದೆ ಸಿದ್ದನಗೌಡ ಪಾಟೀಲ |

**ಅಭಿಯೋಜನೆಯ ಪರವಾಗಿ ಮಾಡಿಸಲಾದ ಸಾಕ್ಷ್ಯಗಳುঃ**

| | | |
|---|---|---|
| ನಿ.ಪಿ.1 | : | ದೂರು |
| ನಿ.ಪಿ.1(ಎ) | : | ಪ್ರಾಸಾ.1 ರವರ ಸಹಿ |
| ನಿ.ಪಿ.2 | : | ಗುನ್ನೆ ಸ್ಥಳದ ಪಂಚನಾಮೆ |
| ನಿ.ಪಿ.2 (ಎ) | : | ಪ್ರಾಸಾ.2 ರವರ ಸಹಿ |
| ನಿ.ಪಿ.2 (ಬಿ) | : | ಪ್ರಾಸಾ.4 ರವರ ಸಹಿ |
| ನಿ.ಪಿ.2 (ಸಿ) | : | ಪ್ರಾಸಾ.7ರವರ ಸಹಿ |
| ನಿ.ಪಿ.3 | : | ಪ್ರಾಸಾ.5 ರವರ ಹೇಳಿಕೆ ಭಾಗ |
| ನಿ.ಪಿ.4 | : | ವರದಿ |
| ನಿ.ಪಿ.5 | : | ಪ್ರಮಥ ವರ್ತಮಾನ ವರದಿ |
| ನಿ.ಪಿ.5(ಎ) | : | ಪ್ರಾಸಾ.7 ರವರ ಸಹಿ |
| ನಿ.ಪಿ.6 | : | ಸರ್ವೇ ನಂಃ 643 ನೇದ್ದರ ಪಹಣಿ ಪತ್ರಿಕೆ |

**ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲುಗಳ ವಿವರಃ**

| | | |
|---|---|---|
| ಮು.ಮಾ-1 | : | ಒಂದು ಫೀಟ ಉದ್ದದ ಒಂದು ಹಿಡಿ ಗಾತ್ರದ ಒಣಗಿದ ತೋಗರಿ ಬೆಳೆ |

**ಆರೋಪಿತರ ಪರವಾಗಿ ವಿಚಾರಣೆಗೊಳಪಡಿಸಲಾದ ಸಾಕ್ಷಿ ದಾರರ ವಿವರಃ**

- ಇಲ್ಲ -

**ಆರೋಪಿತರ ಪರವಾಗಿ ಗುರುತಿಸಲಾದ ದಾಖಲೆಗಳ ವಿವರಃ**

- ಇಲ್ಲ -

ಸಹಿ/-

**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ .ದಂಡಾಧಿಕಾರಿಗಳು,**
**ಸೇಡಂ .**

*****